## ಮೈಸೂರು ವಿಶ್ವವಿದ್ಯಾನಿಲಯದ ಹಾಸನ ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿಯಲ್ಲಿ ಕನ್ನಡ ಹಿರಿಯ ಪ್ರಾಧ್ಯಾಪಕರು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಡೀನ್ ಆಗಿರುವ ಡಾ.ಎಂ.ಎಸ್.ಶೇಖರ್ ಅವರ ವ್ಯಕ್ತಿ ವಿವರ

ಡಾ. ಎಂ.ಎಸ್. ಶೇಖರ್ (೧೯೬೪) ಹಾಸನ ಜಿಲ್ಲೆಯ ಮಲ್ಲಿಗೆವಾಳು ಗ್ರಾಮದವರು. ಅವರ ವಿದ್ಯಾಭ್ಯಾಸ ಹುಟ್ಟೂರು ಮಲ್ಲಿಗೆವಾಳು, ಆಲೂರು, ಹಾಸನ ಮತ್ತು ಮೈಸೂರಿನಲ್ಲಿ ನಡೆಯಿತು. ತಾಯಿ: ದೇವಮ್ಮ, ತಂದೆ: ಸಿದ್ಧಯ್ಯ. ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಎಂ.ಎ. ಪದವಿ (೧೯೮೮). ಯುಜಿಸಿ ಶಿಷ್ಯವೇತನದಲ್ಲಿ ಸಂಶೋಧನೆ ನಡೆಸಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. ಪದವಿ (೧೯೯೪). ಇವರ ಮಾರ್ಗದರ್ಶನದಲ್ಲಿ ಹದಿನೈದಕ್ಕೂ ಹೆಚ್ಚು ಸಂಶೋಧಕರು ಸಂಶೋಧನೆ ನಡೆಸಿ ಪಿಎಚ್.ಡಿ ಪದವಿ ಗಳಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಹಾಸನ ಸ್ನಾತಕೋತ್ತರಕೇಂದ್ರ, ಹೇಮಗಂಗೋತ್ರಿಯಲ್ಲಿ ಅಧ್ಯಾಪಕ, ಪ್ರವಾಚಕ ಮುಖ್ಯಸ್ಥರು (೧೯೯೨-೨೦೦೭), ಕೇಂದ್ರದ ಸಂಯೋಜನಾಧಿಕಾರಿ(೨೦೦೩-೦೪). ಮೈಸೂರು ವಿಶ್ವವಿದ್ಯಾನಿಲಯದ ಮಂಡ್ಯ ಸರ್ ಎಂ.ವಿ. ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ಪ್ರಾಧ್ಯಾಪಕ ಹಾಗೂ ವಿಭಾಗದ ಮುಖ್ಯಸ್ಥರು (೨೦೦೭-೨೦೧೩), ಸರ್ ಎಂ.ವಿ. ಸ್ನಾತಕೋತ್ತರ ಕೇಂದ್ರದ ನಿರ್ದೇಶಕರು (೨೦೧೦-೨೦೧೨), ಮೈಸೂರಿನ ಕರ್ನಾಟಕ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಕುಲಸಚಿವರು, ಪರೀಕ್ಷಾಂಗ (೨೦೧೩-೨೦೧೬), ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಗಾಂಧಿಭವನದ ನಿರ್ದೇಶಕರು (೨೦೧೮-೨೦೨೨), ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕರು(೨೦೨೨)ಕಾರ್ಯನಿರ್ವಹಿಸಿದ ಅಪಾರ ಅನುಭವ. ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದ ಹಾಸನ ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ಹಿರಿಯ ಪ್ರಾಧ್ಯಾಪಕರು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಡೀನ್ ಆಗಿ ಕಾರ್ಯನಿರ್ವಹಣೆ.

ಪ್ರಗತಿಪರ ಸಂಘಟನೆಗಳ ಸನಿಹದಲ್ಲೇ ಇರುವ ಇವರು ತಮ್ಮ ಸೂಕ್ಷ್ಮಸಂವೇದನೆಯ ಮಾನವೀಯ ನಡವಳಿಕೆ, ಚಿಂತನೆಗಳ ಮೂಲಕ ತಣ್ಣಗೆ ತಮ್ಮ ಮೂಲಬೇರುಗಳ ನೆಲೆಗಳನ್ನು ತಡಕುತ್ತಾ ಬರಹ ಮತ್ತು ಸಂಘಟನೆಗಳ ಸಂಗಾತಿಯಾಗಿ ಜನತೆಯ ನಡುವಿನಿಂದ ಬಂದವರು. ಹೀಗಾಗಿ ಜನಪದ ಜಾದೂಗಾರ ಸಯೀದ್ ಹುಸೇನ್, ಮುಸ್ಲಿಂ ಜನಪದ ಕತೆಗಾರ್ತಿಯರು, ಬುದ್ಧಗುರು, ಬಸವಣ್ಣ, ನಾರಾಯಣಗುರು, ಕುದ್ಮುಲ್ ರಂಗರಾಯರು, ಕುವೆಂಪು ಮತ್ತು ಆಧುನಿಕ ಭಾರತ ಕಂಡ ಅನನ್ಯ ಚಿಂತಕ, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಗಳು ಇವರನ್ನು, ತೀವ್ರವಾಗಿ ಪ್ರಭಾವಿಸಿವೆ. ಆಧುನಿಕ ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಕಳಚಿ ಹೋಗಿದ್ದ ಮೊದಲ ತಲೆಮಾರಿನ ದಲಿತ ಲೇಖಕರ ಸಾಹಿತ್ಯ ವಾಚಿಕೆಗಳನ್ನು ಶೋಧಿಸಿ ಆಧುನಿಕ ಕನ್ನಡ ಸಾಹಿತ್ಯದ ಚರಿತ್ರೆಗೆ ಮರುಜೋಡಣೆ ಮಾಡಿದ ಲೇಖಕ ಇವರು.

೨೦೧೯ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದಲ್ಲಿ, ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ದಲಿತ ಸಾಹಿತಿಗಳು, ಎಂಬ ಸಂಶೋಧನಾ ಲೇಖನ ಪ್ರಕಟಣೆಗೊಂಡು, ಇದು ಹೊಸ ಚರ್ಚೆಗೆ ನಾಂದಿಯೂ ಆಗಿದೆ. ಪ್ರಜಾವಾಣಿ ಸಾಪ್ತಾಹಿಕದಲ್ಲಿ: ಸರ್ವರ ಉದಯಕ್ಕೂ ಧ್ಯಾನಿಸಿದ ಗಾಂಧೀಜಿ ಮತ್ತು ಅಂಬೇಡ್ಕರ್, ಗಾಂಧೀಜಿ ಮತ್ತು ಸರ್ವೋದಯ, ನವೋದಯ ಪೂರ್ವದ ಕವಿ, ಲೇಖಕ, ಶಿಕ್ಷಕ ಸೋಸಲೆ ಸಿದ್ದಪ್ಪ, ರಾಗಿಪ್ರಪಂಚದ ದಂತಕಥೆ ರಾಗಿ ಲಕ್ಷ್ಮಣಯ್ಯ, ಸರಳ ಸಂತ ಅಪ್ಪಟ ಗಾಂಧಿ ಶಿಷ್ಯ ಟಿ.ಎಸ್. ಸುಬ್ಬಣ್ಣ, ಸಂಸತ್ತಿನಲ್ಲಿ ಮೊಟ್ಟ ಮೊದಲು ಕನ್ನಡ ಮಾತನಾಡಿದ ಕೋಲಾರದ ಟಿ. ಚನ್ನಯ್ಯ, ಬೀಡಿ ಕಟ್ಟುತ್ತಲೇ ಹೊಮ್ಮುವ ಮುಸ್ಲಿಂ ಜನಪದ ಕಥೆಗಾರ್ತಿ ಖತೀಜಾಬಿ, ಕುವೆಂಪು ಸೃಜಿಸಿದ ದಾರ್ಶನಿಕ ವೈಚಾರಿಕ ಲೋಕ, ಈ ಮುಂತಾದ ಸೂಕ್ಷ್ಮಸಂವೇದನೆಯ ಲೇಖನಗಳು ಪ್ರಕಟಗೊಂಡಿವೆ. ಇವುಗಳು ಗಂಭೀರ ಚಿಂತಕರ, ವಿಮರ್ಶಕರಿಂದ ಚರ್ಚಿತಗೊಂಡು ಹೊಸ ಅರಿವಿಗೆ ಕಾರಣವಾಗಿವೆ. ಸಮಸಮಾಜದ ಆಶಯದಲ್ಲಿ, ವೈಚಾರಿಕ ಗಟ್ಟಿತನದ ನೆಲೆಯಲ್ಲಿ ಇವರು ಮಂಡಿಸಿರುವ ರಾಷ್ಟ್ರಮಟ್ಟದ ವಿಚಾರಗೋಷ್ಠಿಯ ಪ್ರಬಂಧಗಳು, ಸಂವಾದಿಸಿರುವ ಚಿಂತನೆಗಳು, ಹೊಸ ಚಿಂತನೆಗೆ ಎಡೆ ಮಾಡಿಕೊಟ್ಟಿರುವುದು ವಿಶೇಷವಾಗಿದೆ.



Created by Universal Document Converter

# ಪ್ರಕಟಿತ ಕೃತಿಗಳು

**ಕಾವ್ಯ**

- ಗರಿಕೆ –೨೦೧೦
- ಚಿತ್ತಾರ ಜೋಳಿಗೆ–೨೦೨೪

**ಪ್ರವಾಸ ಕಥನ**

- ನಾರಾಯಣಗುರುವಿನ ನಾಡಿನಲ್ಲಿ – ೧೯೯೭

**ಜೀವನ ಚರಿತ್ರೆ**

- ಕುದ್ಮಲ್‌ರಂಗರಾಯರು –೨೦೦೮
- ಜನಪದ ಜಾದೂಗಾರ ಸಯೀದ್ ಹುಸೇನ್ – ೨೦೦೨

**ಕಾದಂಬರಿ**

- ದ್ಯಾವಕ್ಕ (ಅಚ್ಚಿನಲ್ಲಿ)

**ವಿಮರ್ಶೆ**

- ಗ್ರಹಿಕೆ – ೧೯೯೭,
- ಕಣ್ಣುಕಂಡಷ್ಟು –೨೦೦೨
- ಹೊರಳು ಹಾದಿ –೨೦೨೧

**ಸಂಶೋಧನೆ**

- ಶ್ರೀಕೃಷ್ಣ ಆಲನಹಳ್ಳಿ ಅವರ ಸಾಹಿತ್ಯ– ೨೦೦೨
- ಡಿ ಗೋವಿಂದದಾಸ್ ಅವರ ಸಮಗ್ರ ಸಾಹಿತ್ಯ ಸಂಪುಟ – ೨೦೦೭
- ಸೋಸಲೆ ಸಿದ್ದಪ್ಪ ಸಮಗ್ರ ಸಾಹಿತ್ಯ ಸಂಪುಟ – ೨೦೨೧

**ಸಂಪಾದನೆ**

- ನಮ್ಮ ಮುಸ್ಲಿಂ ಹಿನ್ನೆಲೆಯ ಜನಪದ ಕಥೆಗಳು – ೨೦೦೧
- ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ಲೇಖಕರು–೨೦೦೬
- ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮಾನವಪರ ಧೋರಣೆಗಳು–೨೦೦೬
- ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮಹಿಳಾಪರ ಕಾಳಜಿಗಳು–೨೦೦೭
- ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಜಾನಪದ ಪ್ರಜ್ಞೆ –೨೦೦೮
- ಸಂಸ್ಕೃತಿ ಮಹಿಳಾ ಮಾಲಿಕೆ: ಸಂಪುಟ–೨–೨೦೦೮



Created by Universal Document Converter

- ಅನಿಕೇತನ: (ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ–೨೦೦೫–೦೬)
- ದಕ್ಷಿಣ ಭಾರತದ ಮೇಲೆ ಗಾಂಧೀಜಿ ಪ್ರಭಾವ–೨೦೨೧
- ಹೊಯ್ಸಳ ದೀಪ್ತಿ–೨೦೦೬

**ಪ್ರಶಸ್ತಿಗಳು**

- ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪುಸ್ತಕ ಪ್ರಶಸ್ತಿ–೨೦೦೩
- ದಿನಕರ ದೇಸಾಯಿ ಕಾವ್ಯ ಪ್ರಶಸ್ತಿ–೨೦೧೨
- ಕವಿ ಕೆ.ಎಸ್.ನ ಕಾವ್ಯ ಪ್ರಶಸ್ತಿ–೨೦೧೨
- ಡಿ ಗೋವಿಂದದಾಸ್ ಕಾವ್ಯ ಪ್ರಶಸ್ತಿ–೨೦೧೨
- ದಲಿತ ಸಾಹಿತ್ಯ ಪರಿಷತ್ ಗೌರವ ಪ್ರಶಸ್ತಿ–೨೦೧೮
- ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆ ಗೌರವ–೨೦೧೩
- ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಕಾರ್ಯನಿರ್ವಹಣೆ–೨೦೦೫–೨೦೦೮



Created by Universal Document Converter